Doc 519
7-P-2

Reg no KRNN 12 - For Influential Publicity - 31-10-76

ಸ್ವರ್ಣ ಮಹೋತ್ಸವ ನೆರವೇರಿ ವಜ್ರ ಮಹೋತ್ಸವ ನೇರವೇರಿಸಲಿರುವ

ಸತ್ಯವಾದಿ
SATYAVADI

60 th Diamond Jubilee Year
ನೇ ವಜ್ರಮಹೋತ್ಸವ ವರ್ಷ

★ Satyavadi Daily . Mysore 4 ★

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು :-ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್

ಬಲಾತ್ಕಾರಕ್ಕೆ ಅವರು ತುಂಬಾ ವಿರೋಧಿ

ಲಂಡನ್ — ಭಾರತದ ಜನಸಂಖ್ಯೆ ಅದುನುಲು ಶಂತಾನಹರಣ ಚಿಕಿತ್ಸೆ ಪ್ರಚಾರದಲ್ಲಿ ಬಲಾತ್ಕಾರಕ್ಕೆ ತಾವು ತೀವ್ರ ವಿರೋಧಿಯೆಂದು ಭಾರತ ಆರೋಗ್ಯ ಹಾಗೂ ಕುಟುಂಬ ಯೋಜನಾ ಮಂತ್ರಿ ಶ್ರೀ ಕರಣಸಿಂಗರು ತಿಳಿಸಿದರು.

●

ಬೆಂಕಿ ಅನಾಹುತದಿಂದ ತುಂಬಾ ಕಟ್ಟಡಗಳ ನಾಶ

ಜಪಾನಿನ ಸಕಾಟೋ ನಗರದಲ್ಲಿ ಮೊನ್ನೆ ಆದ ಅಗ್ನಿ ಅನಾಹುತದಲ್ಲಿ ಒಂದು 6 ಅಂತಸ್ತಿನ ಡಿಪಾರ್ಟ್‌ಮೆಂಟು ಸ್ಟೋರು ಮತ್ತು ಒಂದು ಸೂಪರ್ ಮಾರ್ಕೆಟ್ ಸೇರಿ 467 ಕಟ್ಟಡಗಳು ನಾಶವಾದವು

●

ಮತ್ತೆ ಅವರ ನೇಮಕದ ಸಂಭವ

ವಿಶ್ವಸಂಸ್ಥೆ — ಮುಂದಿನ ತಿಂಗಳು 31 ರಂದು ನಿವೃತ್ತರಾಗುವ ಪ್ರಧಾನ ಕಾರ್ಯದರ್ಶಿ ಡಾ ಕುರ್ಟ್ ವಾಲ್‌ಹೀಂ ಮತ್ತೊಂದು ಅವಧಿಗೆ ನೇಮಕಗೊಳ್ಳುವಂತಿದೆ ವಿಶ್ವದ ಅತಿ ಘನಹೊಂದಿದ ಕಾರ್ಯಾಂಗದ ಉದ್ಯೋಗನಾದ ಇದಕ್ಕೆ ವರ್ಷಕ್ಕೆ ತೆರಿಗೆ ವಿನಾಯಿತಿ 62 ಸಾವಿರ ಡಾಲರು ಸಂಬಳವಿದೆ. ಈ ಹಣದ ಅರ್ಧದ ವಿರಾಮ ವೇತನ ಇವೆ ಇದರ ಹೊಣೆಗಾರಿಕೆಯೂ ತುಂಬಾ ಹೆಚ್ಚಾಗಿದೆ.

○

ಜಾತಿ ಮತ್ತು ಕೋಮು ಭಾವನೆ ತ್ಯಜಿಸಲು ಅಧ್ಯಕ್ಷರ ಕರೆ

ಹೈದರಾಬಾದು — ಭಾರತ ಅಧ್ಯಕ್ಷ ಶ್ರೀ ಫಕ್ರುದ್ದೀನ್ ಅಲಿ ಅಹಮದ್ ರವರು ಒಂದು ಸಮಾರಂಭದಲ್ಲಿ ಜಾತಿ ಮತ್ತು ಕೋಮು ಭಾವನೆ ತ್ಯಜಿಸಲು ಕರೆ ಕೊಟ್ಟರು.

★

ಒಂಬತ್ತು ಲಕ್ಷ ರೂ ವೆಚ್ಚ ಮಾಡಲಾಗುವುದು

ಧಾರವಾಡ — ಅಭಾವ ಭಾಗಗಳಲ್ಲಿ ಮೇವು ಮತ್ತು ನೀರು ಒದಗಿಸಲು 9 ಲಕ್ಷ ರೂಪಾಯಿಗಳನ್ನು ಸರ್ಕಾರ ಒದಗಿಸಲಿದೆ ಎಂದು ಜಿಲ್ಲಾಧಿಕಾರಿ ಶ್ರೀ ಇನಾಂದಾರ ರಾಯರು ಇಲಾಖೆ ಅಧಿಕಾರಿಗಳ ಸಭೆಯಲ್ಲಿ ತಿಳಿಸಿದರು

★

ಮುಖ್ಯ ಮಂತ್ರಿ ಷೇಕ್ ಅಬ್ದುಲ್ಲ ಹೊರಡಿಸಿದ ಆಜ್ಞೆ

ಶ್ರೀನಗರ — ಭೇಟಿ ಕೊಡುವ ಗಣ್ಯ ವ್ಯಕ್ತಿಗಳನ್ನು ಸ್ವಾಗತ ಮಾಡಲು ಶಾಲೆಗಳಿಂದ ಬಾಲಕ, ಬಾಲಕಿಯರನ್ನು ಕರೆತರುವ ಅಭ್ಯಾಸವನ್ನು ತಕ್ಷಣ ನಿಲ್ಲಿಸಲು ಮುಖ್ಯ ಮಂತ್ರಿ ಶ್ರೀ ಷೇಕ್ ಅಬ್ದುಲ್ಲರು ಆಜ್ಞೆ ಮಾಡಿದರು.

○

ನವೆಂಬರ್ 4 ರಿಂದ 7 ರ ವರೆಗೆ ಉಜ್ಜಯಿನಿಯಲ್ಲಿ 5 ನೇ ಅಖಿಲ ಭಾರತ ಭೂಗೋಳದ ಕಪ್ ಕಬಡ್ಡಿ ಟೂರ್ನಮೆಂಟ್ ನಡೆಯುವುದು.

ಕ್ರೀಡೆಗಳಲ್ಲಿ ಭಾಗವಹಿಸುವವರು

ಬೆಂಗಳೂರು — 230 ಹುಡುಗಿಯರೂ ಸೇರಿ 530 ಮಂದಿ, 31 ರಿಂದ ಆರಂಭವಾಗುವ 3 ದಿನಗಳ ನಡೆಯುವ ರಾಜ್ಯ ಮಟ್ಟದ ಆಟಗಳು ಮತ್ತು ಕ್ರೀಡೆಗಳಲ್ಲಿ ಭಾಗವಹಿಸುವರು.

★

78 ಕ್ಕೆ ಲೋಕಸಭೆ ಚುನಾವಣೆ

ಲೋಕಸಭೆಗೆ ಮಾರ್ಚ್ 77 ರಿಂದ 1 ವರ್ಷ ಜೀವದಾನ ಮಾಡಲಾಗುವುದು ಈ ಸಂಬಂಧದ ಮಸೂದೆ ಈ ಅಧಿವೇಶನದಲ್ಲಿ ನ್ಯಾಯಶಃ ತರಲಾಗುವುದು ಈಗ ದೇಶದಲ್ಲಿ ಚುನಾವಣೆ ನಡೆಸಲು ಸಕಾಲವಾಗಿಲ್ಲ ಎಂದು ನ್ಯಾಯಾಂಗ ಮಂತ್ರಿ ಶ್ರೀ ಗೋಖಲೆಯವರು ಲೋಕಸಭೆಯಲ್ಲಿ ತಿಳಿಸಿದರು.

●

ಮುಖ್ಯ ಮಂತ್ರಿಗಳ ಸ್ವಾಗತ

ಲೋಕಸಭೆಯ ಜೀವಿತವನ್ನು 78 ನೇ ಮಾರ್ಚ್ ವರೆಗೆ ಹೆಚ್ಚಿಸುವ ನಿರ್ಧಾರವನ್ನು ಮುಖ್ಯ ಮಂತ್ರಿ ಶ್ರೀ ಡಿ ದೇವರಾಜ ಅರಸರು ಸ್ವಾಗತಿಸಿದ್ದಾರೆ.

ಆಚಾರ್ಯರಿಗೆ ಭರವಸೆ

ಪೌನಾರ್ — ಡಿಸೆಂಬರ್ 21 ರೊಳಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ದೇಶದಲ್ಲಿ ಗೋಹತ್ಯ ನಿರೋಧ ಕುರಿತು ಶಾಸನ ಕ್ರಮಗಳು ಸೇರಿ ಅವಶ್ಯಕವಾದ ಕ್ರಮಗಳನ್ನು ಕೈಗೊಳ್ಳುವುದಾಗಿ ತಮಿಳುನಾಡು ರಾಜ್ಯಪಾಲರಿಂದ ಶ್ರೀ ವೋಹನ ಲಾಲ್ ಸುಖಾಡಿಯಾರವರು ಆಚಾರ್ಯ ಭಾವೆಯವರಿಗೆ ಭರವಸೆ ಇತ್ತರು.

○

20 ಮಂದಿಯ ಮರಣ

ಜಕಾರ್ತಾ — ಇಂಡೋನೇಷಿಯಾದ ಇರಿಯನ್ ಜಾವಾ ಭಾಗದಲ್ಲಿ ಅದ ಭೂಕಂಪದಲ್ಲಿ 20 ಮಂದಿ ಸತ್ತರು.

★

ಬರೋಡಾ — ದೇಶೀಯ ತಯಾರಿಕೆ ಬಂದೂಕ ಮತು ಆಯುಧಗಳನ್ನು ನ್ಯಾಯಬಾಹಿರವಾಗಿ ಹೊಂದಿರುವವರ ವಿರುದ್ಧ ಕಾರ್ಯದಲ್ಲಿ ಪೋಲೀಸರು ಬುಗಲ ಗಾವ್ ಗ್ರಾಮದಲ್ಲಿ ದೇಶೀಯ ತಯಾರಿಕೆ 2 ರಿವಾಲ್ವರ್ ಗಳನ್ನು ವಶಪಡಿಸಿಕೊಂಡು ಇಬ್ಬರನ್ನು ಬಂಧಿಸಿದರು.

ವುಡ್‌ಲಾಂಡ್ 29 10 76 ರಿಂದ

ಅವೋಫು 3ನೇ ವಾರ

ಮಾ

ಅ ಪೆ ರಾ 29 10 76ರಿಂದ

ರಾಣಿ ಹೊನ್ನಮ್ಮ ಇಲ್ಲ ಹೊಸ ಕಾಪಿ

ಕರ್ನಾಟಕ ಅರಣ್ಯ ಇಲಾಖೆ
ಅಬ್ಸ್ಟಾಕ್ "ಟೆಂಡರ್-ಮತ್ತು
ಹರಾಜು" ವಾರ್ಷಿಕ

ಪ್ರಕಟಣೆ

ಸಂ ನಂ ಎಚಿಎಂ-ಬಿಆರ್-24-ಟೆಂಬಿ/
76-77 ತಾ. 19 ಅಕ್ಟೋಬರ್ 1976

ಥಂಗಡಿ ಮತ್ತು ಕಟ್ಟೆ ತೊಗಟೆ ಮಾರಾಟ
1976-78 ನೇ ಸಾಲಿಗೆ

ಎಲ್ಲ ರಾಜ್ಯ (ವಿಭಜಿತ) ಅರಣ್ಯಗಳು, ಪ್ರೈವೇಟ್ ಅರಣ್ಯಗಳು, ರಿಸರ್ವ್‌ಗಳು ಮತ್ತು ಇತರ ಸರ್ಕಾರದ ಅನುಭವದಲ್ಲಿ ಇಲ್ಲದಿರುವ ಭೂಮಿಗಳನ್ನು 1978 ರ ಜೂನ್ ಕಡೆಗೆ ಮಾರಾಟ ಸ್ಥಿರಗೊಳಿಸುವ ತಾರೀಖಿನಿಂದ ಆಗುವ ಅವಧಿಯ ವರೆಗೆ ಈ ಕೆಳಗೆ ಕಂಡ ತಾಲ್ಲೂಕುಗಳಲ್ಲಿ ತಾಲ್ಲೂಕು ಅರಣ್ಯಾಧಿಕಾರಿ ಅಥವಾ ಹೊಬಳಿ-ವಾರ್, ಅರಣ್ಯ ರೇಂಜ್ ವಾರ್ ಅಥವಾ ಫಿಕಾರ್-ವಾರ್ ಕಟ್ಟೆ (ಕಾಫಿಯ ಫಿಸ್ಟೂಲ) ಮತ್ತು ಥಂಗಡಿ (ಕಾಫಿಯ ಅರಿಕ್ಯೂರಿಟ) ಇವುಗಳ ತೊಗಟೆಗಳನ್ನು ಸಂಗ್ರಹಿಸುವ ಕೆಲಸವನ್ನು ಮಾರಾಟ ಮಾಡಲಾಗುವುದು. ಸಂದರ್ಭಾನುಸಾರ, "ಟೆಂಡರ್ - ಮತ್ತು - ಹರಾಜು" ಆಧಾರದ ಮೇಲೆ ಸಂಬಂಧಪಟ್ಟ ವಿಭಾಗದ ವಿಭಾಗ ಅರಣ್ಯ ಅಧಿಕಾರಿಯವರಿಂದ ಅಥವಾ ಅವರಿಂದ ಅಧಿಕಾರ ಪಡೆದ ಮತ್ತಾವ ಅಧಿಕಾರಿಯವರಿಂದ ಈ ಕೆಳಗೆ ಸೂಚಿಸಿರುವ ಸ್ಥಳಗಳಲ್ಲಿ ಮತ್ತು ತಾರೀಖುಗಳಲ್ಲಿ ಏಲೆ ಮಾಡಲಾಗುವುದೆಂದು ಸಾರ್ವತ್ರಿಕ ತಿಳಿವಳಿಕೆಗಾಗಿ ಈ ಮೂಲಕ ಪ್ರಕಟಣೆ ಮಾಡಿದೆ

ಈ ಮಾರಾಟಗಳಿಗೆ ಮೊದಲು ಬೇರೆ ರೀತಿಯಲ್ಲಿ ಏರ್ಪಾಡಿ ತಾಲ್ಲೂಕು ಅಥವಾ ಹೊಬಳಿ ಅಥವಾ ಫಿಕಾರ್ ಅಥವಾ ರೇಂಜ್ ಏಲೇ ಆಗಿದ್ದಲ್ಲಿ ಈ ಮಾರಾಟಗಳಿಂದ ವಾರಸು ಪಡೆದವರು ದಾಗಿ ಪರಿಗಣಿಸಲಾಗುವುದು ಮತ್ತು "ಟೆಂಡರ್-ಮತ್ತು-ಹರಾಜು" ಸಂಬಂಧಿಸಿದಂತೆ ಅವುಗಳ ಮಾರಾಟದ ಪ್ರಕಟಣೆ ರದ್ದಾಗುವುದು

"ಟೆಂಡರ್-ಮತ್ತು-ಹರಾಜು" ಗೆ ಈಗ ಜಾಹೀರು ಮಾಡಿರುವ ಯಾವುದೇ ಯೂನಿಟ್‌ನ್ನು "ಟೆಂಡರ್-ಮತ್ತು-ಹರಾಜು" ಇದರಿಂದ ವಾರಸು ಪಡೆಯುವ ಹಕ್ಕು ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯವರಿಗೆ ಅಥವಾ ಮಾರಾಟ ನಡೆಸುವ ಅಧಿಕಾರಿಯವರಿಗೆ ವೀಲಾಗಿದೆ

ಮಾರಾಟ ಮಾಡುವ ಸ್ಥಳ - ವಿಭಾಗ ಅರಣ್ಯ ಕಚೇರಿ, ಮೈಸೂರು. ಮೊದಲನೆ ಯೂನಿಟ್ ವಿಭಾಗ ಅರಣ್ಯ ಕಚೇರಿ, ಚಾಮರಾಜನಗರ 2 ನೇ ಯೂನಿಟ್ ಮತ್ತು ವಿಭಾಗ ಅರಣ್ಯ ಕಚೇರಿ ಮುಂಡ್ಯ 3 ನೇ ಕೆಲಸ. ಟೆಂಡರ್ ಸ್ವೀಕರಿಸುವ ಕಾಲ ಮತ್ತು ತಾರೀಖು - ಮೊದಲನೆ ಯೂನಿಟ್‌ಗೆ 8-11-76 ಮಧ್ಯಾಹ್ನ 2 ಗಂಟೆ ವರೆಗೆ ಎರಡನೆ ಯೂನಿಟ್‌ಗೆ 10-11-76 ಮಧ್ಯಾಹ್ನ 2 ಗಂಟೆ ವರೆಗೆ, ಮೂರನೇ ಯೂನಿಟ್‌ಗೆ 12-11-76 ಮಧ್ಯಾಹ್ನ 2 ಗಂಟೆ ವರೆಗೆ ಹರಾಜು ಮಾರಾಟದ ಕಾಲ ಮತ್ತು ತಾರೀಖು -, ಮೊದಲನೇ ಕೆಲಸಕ್ಕೆ 9-11-76 ರ ಮಧ್ಯಾಹ್ನ 2 ಗಂಟೆ, 2 ನೇ ಕೆಲಸಕ್ಕೆ 11-11-76 ರ ಮಧ್ಯಾಹ್ನ 2 ಗಂಟೆ ಮತ್ತು 3 ನೇ ಕೆಲಸಕ್ಕೆ 13-11-76 ರ ಮಧ್ಯಾಹ್ನ 2 ಗಂಟೆ.

ಸೀನ	ಯೂನಿಟ್ ಹೆಸರು
1	ಮೈಸೂರು ಅರಣ್ಯ ವಿಭಾಗ
	1 ಹೆಗ್ಗಡದೇವನಕೋಟೆ ತಾಲ್ಲೂಕು (ಕಾಕನಕೋಟೆ, ಹೆಗ್ಗಡದೇವನಕೋಟೆ ರೇಂಜ್‌ಗಳು, ಏನೂರ್ ವಾರಿಗುಡಿ ರೇಂಜ್ (ಪ್ರಾಜೆಕ್ಟ್ ಟೈಗರ್ ಪ್ರದೇಶದಲ್ಲಿ ಸೇರದಿರುವ ಭಾಗ ಮಾತ್ರ)
	2 ಮೈಸೂರು ತಾಲ್ಲೂಕು
	3 ಟಿ ನರಸೀಪುರ ತಾಲ್ಲೂಕು
2	ಚಾಮರಾಜನಗರ ವಿಭಾಗ
	1 ನಂಜನಗೂಡು ತಾಲ್ಲೂಕು,
	2 ಗುಂಡ್ಲುಪೇಟೆ ತಾಲ್ಲೂಕು
	3 ಚಾಮರಾಜನಗರ ತಾಲ್ಲೂಕು
	4 ಯಳಂದೂರು ತಾಲ್ಲೂಕು
3	ಮಂಡ್ಯ ಅರಣ್ಯ ವಿಭಾಗ
	1 ಶ್ರೀರಂಗಪಟ್ಟಣ ತಾಲ್ಲೂಕು
	2 ಕೃಷ್ಣರಾಜಪೇಟೆ ತಾಲ್ಲೂಕು
	3 ನಾಗಮಂಗಲ ತಾಲ್ಲೂಕು
	4 ಪಾಂಡವಪುರ ತಾಲ್ಲೂಕು
	5 ಮದ್ದೂರು ತಾಲ್ಲೂಕು
	6 ಮಂಡ್ಯ ತಾಲ್ಲೂಕು
	7 ಮಳವಳ್ಳಿ ತಾಲ್ಲೂಕು
	8 ಚನ್ನಪಟ್ಟಣ ತಾಲ್ಲೂಕು
	9 ಕನಕಪುರ ತಾಲ್ಲೂಕು - ಮಂಡ್ಯ ಅರಣ್ಯ ವಿಭಾಗದ, ಸಾಥ್ನೂರು ಅರಣ್ಯ ರೇಂಜ್‌ನ ಉಡಳಿತ ವ್ಯಾಪ್ತಿಯೊಳಗೆ ಬರುವ ಪ್ರದೇಶದ ಭಾಗ ಮಾತ್ರ

ಸೂಚನೆ — ವಿಧಾಯಕವಾದ ಫಾರಂಗಳಲ್ಲಿ ಮಾತ್ರ ಟೆಂಡರ್‌ಗಳನ್ನು ಕೊಡಬೇಕು. ಸಂಬಂಧಿಸಿದ ಅರಣ್ಯ ವಿಭಾಗಗಳ ವಿಭಾಗ ಅರಣ್ಯ ಅಧಿಕಾರಿಗಳಲ್ಲಿ ವಿಧಾಯಕವಾದ ಟೆಂಡರ್ ಫಾರಂನ್ನು ರೂ. 5 (ಐದು ರೂಪಾಯಿಗಳು) ಇದರೊಡನೆ ಎಸ್. ಟಿ, ಎಸ್. ಸಿ, ಎಫ್. ಡಿ ಟಿ. ಮುಂತಾದುವನ್ನು ಈಗಿನ ದರಗಳಲ್ಲಿ ಪಾವತಿ ಮಾಡಿ ಪಡೆಯಬಹುದು.

ಸಂಬಂಧಿಸಿದ ವಿಭಾಗ ಅರಣ್ಯ ಅಧಿಕಾರಿಗಳವರು ಟೆಂಡರ್ ಸ್ವೀಕರಿಸುವ ದಿನ ಮಧ್ಯಾಹ್ನ 12 ಗಂಟೆ ವರೆಗೆ ಮಾತ್ರ ಟೆಂಡರ್ ಫಾರಂಗಳನ್ನು ಕೊಡುವರು.

ಅನ್ವೇಷ್ಟಿಹಣ ಠೇವಣಿ, ಸಾಲ್ವೆನ್ಸಿ, ಮಾರಾಟ ತೆರಿಗೆ, ವರಮಾನ ತೆರಿಗೆ ಪಾವತಿ ಮಾಡಿದ ಸರ್ಟಿಫಿಕೆಟ್‌ಗಳು, ಲೀಸ್‌ನ ವಿವರಯುತ ಷರತ್ತುಗಳು ಇವುಗಳ ಬಗ್ಗೆ ಹೆಚ್ಚು ವಿವರಗಳನ್ನು ಅಪೇಕ್ಷಿಸುವ ಕೊಳ್ಳುವವರು ಸಂಬಂಧಿಸಿದ ವಿವರಯುತ ಪ್ರಕಟಣೆಯ ಪ್ರತಿಗಳನ್ನು ಸಂಬಂಧಿಸಿದ ಅರಣ್ಯ ವಿಭಾಗದ ವಿಭಾಗ ಅರಣ್ಯ ಅಧಿಕಾರಿಯವರಿಂದ ಪಡೆಯಬಹುದು.

ಸಹಿ/- ಅರಣ್ಯಗಳ ಕನ್ಸರ್ವೇಟರ್,
ಮೈಷೂರು ವೃತ್ತ, ಮೈಸೂರು.

ಸಂಜಯ ಗಾಂಧಿಯವರ ಅಭಿಪ್ರಾಯ

ಬೊಂಬಾಯಿ — ದೇಶದಲ್ಲಿ ಆರ್ಥಿಕ ಪರಿಸ್ಥಿತಿ ಭದ್ರಗೊಳ್ಳುವ ವರೆಗೆ ಚುನಾವಣೆಗಳನ್ನು ಮುಂದೆ ಹಾಕಬೇಕೆಂದು ಅಭಿಪ್ರಾಯಪಟ್ಟಿದ್ದಾರೆ.

ಮಠಾಧೀಶರುಗಳ ಕರೆ

ಮಂಡ್ಯ — ಶ್ರೀ ಭೇಜಾವರ ಮಠಾಧೀಶರೂ ಸೇರಿ 5 ಮಠಾಧಿಪತಿಗಳು ಬಹಿರಂಗ ಸಭೆಯಲ್ಲಿ ಒಂದೇ ನೇದಕೆಯಿಂದ ಮಾಡಿದ ಭಾಷಣದಲ್ಲಿ ಸನಾತನ ಧರ್ಮ ಮತ್ತು ಭಾರತ ಸಂಸ್ಕೃತಿಯ ಪುನರುದ್ಧಾರಕ್ಕೆ ಜನತೆಗೆ ಕರೆ ನೀಡಿದರು.

ಅವಧಿ ವಿಸ್ತರಣೆಯ ಸೂಚನೆ

ನವ ದೆಹಲಿ — ರಾಜ್ಯಗಳ ಶಾಸನ ಸಭೆಗಳ ಅವಧಿಯೂ ವಿಸ್ತರಿಸಲ್ಪಡುವಂತಿದೆ.

"ಸತ್ಯವಾದಿ" ವಜ್ರ ಮಹೋತ್ಸವ

ಭಗವಂತನ ಕೃಪೆಯಿಂದ "ಸತ್ಯವಾದಿ" ಯು 60 ನೇ ವರ್ಷ ಅರ್ಥಾತ್ ವಜ್ರ ಮಹೋತ್ಸವ ವರ್ಷವನ್ನು ಪ್ರವೇಶಿಸಿರುವುದೆಂಬುದನ್ನು ತಿಳಿಸಲು ಹರ್ಷಿಸುತ್ತೇವೆ.

ಸ್ವರ್ಣಮಹೋತ್ಸವ ಕಾಲದಲ್ಲಿ ದೊರೆತ ಶ್ರೀ ಜಗದ್ಗುರುಗಳವರ, ಶ್ರೀಸ್ವಾಮಿಗಳವರ ಆಶೀರ್ವಾದ ಅನುಗ್ರಹವನ್ನು, ಉದಾರತೆಯಿಂದ ಕೂಡಿದ ಮಹನೀಯರ ನೆರವನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿಕೊಂಡು, ರಾಜ್ಯದ ಪ್ರಸ್ತುತವು ವಜ್ರ ಮಹೋತ್ಸವದ ಯಶಸ್ವಿ ನೆರವೇರುವಿಕೆಗೆ ಪೂರ್ಣ ಸಹಾಯ ದೊರೆಯುವುದೆಂಬ ವಿಶ್ವಾಸ ಹೊಂದಿದ್ದೇವೆ.

SHAKTI
SUDHA

A Superb Tonic

ಭಾರತದಲ್ಲಿ ಗೋವಧೆ
ಪೂರ್ಣ ನಿಷೇಧವಾಗಲಿ

Edited Printed and Published by Dharmapracharanirata M S. Krishna Rao (Proprietor) at the Sarvodaya Press Chamarajapuram Mysore 4